7

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಸಭಾಪತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 8/1/2021

# ನಾನೇ ಸಭಾಪತಿಯಾಗಬಹುದು



**ಹುಬ್ಬಳ್ಳಿ:** ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಎಲ್ಲರೂ ನನಗೆ ಬೇಕಾದವರಿದ್ದಾರೆ. ಪರಿಷತ್ ಸಭಾಪತಿ ಹುದ್ದೆಗೆ ಎಲ್ಲ ಪಕ್ಷದವರಿಂದ ಬೆಂಬಲ ದೊರೆಯಲಿದೆ. ಹಾಗಾಗಿ ನಾನೇ ಸಭಾಪತಿ ಆಗಬಹುದು ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ನಡೆದ ನಗರಾಭಿವೃದ್ಧಿ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಂತರ ಮಾಧ್ಯಮದವರ ಜತೆ ಮಾತನಾಡಿದ ಅವರು, ''ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡರು ಸಭಾಪತಿ ಸ್ಥಾನಕ್ಕೆ ನನ್ನ ಹೆಸರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಎಲ್ಲ ಪಕ್ಷಗಳು ಸಹಮತ ವ್ಯಕ್ತಪಡಿಸುವ ವಿಶ್ವಾಸ ಇದೆ. ಕೊನೆಗಳಿಗೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಹಾಕಿದರೆ ಆಗ ನೋಡಬೇಕಾಗುತ್ತೆ. ಆದರೆ, ಯಾರೂ ಆ ರೀತಿ ಮಾಡಲಿಕ್ಕಿಲ್ಲ'' ಎಂದು ಹೇಳಿದರು.